referred to the Public Service Commission and the P. S. C. should concur and then it comes before the Government for finalisation.

ಶ್ರೀ ಎಂ. ಬಿ. ರಾಮಸ್ವಾಮಿ.—ತಾವು 26 ಡೆಪ್ಯುಟಿ ಡೈರೆಕ್ಟರ್ ಪೋಸ್ಟ್ಗಳು ಖಾಲಿ ಇವೆ ಎಂದು ಹೇಳಿದ್ದೀರಿ. ಎಷ್ಟು ವರ್ಷಗಳಿಂದ ಖಾಲಿ ಇವೆ.

ಶ್ರೀ ಎ. ಆರ್. ಬದರಿನಾರಾಯಣ್.—ಖಾಲಿ ಎಂದರೆ ಡಿ. ಡಿ. ಪಿ. ಐ. ಪೋಸ್ಟು ಫಿಲ್ ಅಪ್ ಆಗಿದೆ. ಜೂನಿಯರ್ ಆಫೀಸರ್ಸ್ ಹಾಕಿದ್ದೇವೆ. ಆಕ್ಟಿಂಗ್ ಡಿಡಿಪಿಐ ಇದ್ದಾರೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಉತ್ತರ ಕನ್ನಡ ಜಿಲ್ಲೆಯಲ್ಲಿ ಕ್ಲಾಸ್ 3 ಕ್ಲಾಸ್ 2 ಅಧಿಕಾರಿಯನ್ನು ಡಿ.ಡಿ.ಪಿ.ಐ. ಆಗಿ ಇತ್ತೀಚೆಗೆ ಏರಿಸಿರುವುದರಿಂದ ಇಲ್ಲಿ ಶಾಲಾ ಕೆಲಸಗಳು ಸಮರ್ಪಕವಾಗಿಲ್ಲ, ಆಡಳಿತವು ಸಮರ್ಪಕವಾಗಿಲ್ಲ. ಆದುದರಿಂದ ರಿನಲ್ಟ್ಸ್ ಕೀಳು ದರ್ಜೆಯಲ್ಲಿ ಬಂದಿರುವುದು ನಿಜವೇ?

ಶ್ರೀ ಎ. ಆರ್. ಬದರಿನಾರಾಯಣ್.—ಉಪಾಧ್ಯಾಯರುಗಳು ಎಲ್ಲಾ ಸುಪ್ರಿಮ್ಕೋರ್ಟಿಗೆ ಹೋಗಿ ರಿಪ್ರೀಡೆಡ್ ಆಗಿ ಸ್ವೇ ಆರ್ಡರ್ ತಂದು ಏನು ಮಾಡದೆ ಹಾಗೆ. ಇರುವುದರಿಂದ 3 ತಿಂಗಳಿಂದ ತೊಂದರೆಯಾಯಿತು. ಅದು ಸರ್ಕಾರದ ಜವಾಬ್ದಾರಿಯಲ್ಲ. ಅನಾನುಕೂಲವಾಗಿದೆ ಎನುವುದನ್ನು ಒಪ್ಪುತ್ತೇನೆ. ಅದು ಅನಿವಾರ್ಯ. ಅವರಿಗೆ ಕೋರ್ಟಿಗೆ ಹೋಗಿ ತಡೆ ಹಾಕಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ನಾನಾ ರೀತಿ ಕಿರುಕುಳ ತೊಂದರೆ ಕೊಟ್ಟರೆ ಕೋರ್ಟಿಗೆ ಮೊರೆ ಹೋಗದೆ ಇನ್ನು ಎಲ್ಲಿಗೆ ಹೋಗುತ್ತಾರೆ.

ಶ್ರೀ ಎ. ಆರ್. ಬದರಿನಾರಾಯಣ್.—ಸ್ಟೇಟ್ ಇಂಟಿಗ್ರೇಷನ್ ಯಾವಾಗ ಆಯಿತು ಆಗ ಇಂಟರ್ ಸ್ಟೇಟ್ ಸಿನಿಯಾರಿಟಿ ಲಿಸ್ಟ್ನಲ್ಲಿ ಸ್ವಲ್ಪ ಹೆಚ್ಚು ಕಡಮೆಯಾಗಿರುವುದರಿಂದ ಅವರು ಕೋರ್ಟಿಗೆ ಹೋಗಿದ್ದಾರೆ.

ಶ್ರೀ ಎಂ. ಮಲ್ಲಪ್ಪ.—ಇನ್ಚಾರ್ಜ್ ಅರೇಂಜ್ಮೆಂಟ್ ಒಂದು ವರ್ಷದಿಂದ ಮಾಡಿದ್ದೀರಿ. ಡಿಸ್ಟ್ರಿಕ್ಟ್ ಲೆವೆಲ್ನಲ್ಲಿ ಅಡ್ಮಿನಿಸ್ಟ್ರೇಷನ್ ಹಾಳಾಗಿ ಹೋಗಿದೆ. ಸುಪ್ರೀಮ್ ಕೋರ್ಟ್ ಸ್ವೇ ಆರ್ಡರ್ ವೆಕೇಟ್ ಆಗಿದೆ ಎಂದು ಹೇಳುತ್ತೀರಿ. ತಾವು ಹೇಳಿದ ಫಾರಮಾಲಿಟೀಸ್, ಕಾನ್ಫಿಡೆನ್ಷಿಯಲ್ ರಿಪೋರ್ಟ್, ಪಬ್ಲಿಕ್ ಸರ್ವೀಸ್ ಕಮಿಷನ್ ರಿಪೋರ್ಟ್ ಇದು ಎಲ್ಲಾ ಬಂದು ಪರಮನೆಂಟ್ ಅರೇಂಜ್ಮೆಂಟ್ ಎಷ್ಟು ಅವಧಿಯಲ್ಲಿ ಮಾಡಬಹುದು ಎಂದು ಹೇಳುತ್ತೀರಿ?

Sri A. R. BADARINARAYANA.—It will be immediately done.

Filling up The Post of D. D. P. I. In Nortn Kanara District

(652) Sri VIRUPAKSHA M. GHADI (Haliyal).—

Will the Minister for Education be pleased to state :—

(*a*) whether Government is aware that the post of the Deputy Director of Education in North Kanara District is vacant since the last 14 months;

(*b*) the reasons for not filling up the post but only for making in-charge arrangement by posting a Class II Officer who is to retire on 24th June 1972 ;

(*c*) whether there is any proposal to make immediate arrangement to fill the post by a permament officer?

Sri A. R. BADARINARAYANA (Minister for Education).—

(*a*) Under Rule 32 of the M. C. S. Rs. arrangements have been made to fill up the post of the Deputy Director of Public Instruction in North Kanara District.

(*b*) Consequent on the judgement of the High Court in Writ Petitions No. 25 and 137/1966 and Stay Order of the Supreme Court in Writ Petition No. 12/1972, the implementation of the promotion from Class III to Class II and consequently to Class I has not been possible.

(*c*) The same is under consideration of Government, as the Supreme Court have now vacated the Stay Order in Writ Petition No. 12/1972.

ಶ್ರೀ ವಿರುಪಾಕ್ಷ ಗಾಡಿ.—ನಾನು ಕೊಟ್ಟ ಮೂಲ ಪ್ರಶ್ನೆಗಿಂತ ಈಗ ಪ್ರಿಂಟ್ ಆಗಿರುವುದು ಬದಲು ಆಗಿದೆ. ಕೆಲವು ಭಾಗ ಬಹಳ ಮುಖ್ಯವಾದುದು.

ಅಧ್ಯಕ್ಷರು.—ನಮಗೆ ಹಾಗೆ ಮಾಡುವ ಅಧಿಕಾರ ಇದೆ. ಎಷ್ಟು ಬೇಕೋ ಅಷ್ಟು ತೆಗೆಯಿರಿ.

ಶ್ರೀ ವಿರುಪಾಕ್ಷ ಗಾಡಿ.—ಬಹಳ ಮಹತ್ವ ಇದ್ದ ಪ್ರಶ್ನೆ ತೆಗೆದುಬಿಟ್ಟಿದ್ದಾರೆ.

ಅಧ್ಯಕ್ಷರು.—ತಾವು ಈಗ ಉಪ ಪ್ರಶ್ನೆ ಕೇಳಿ.

Sri VIRUPAKSHA M. GHADI.—The post is vacant and it is being filled up by an incharge D. D. P. I.

†Sri A. R. BADARINARAYANA.—Permanent arrangements will be made very shortly.

Sri VIRUPAKSHA M. GHADI.—Class II officers also are retired on the completion of 55 years ?

Sri A. R. BADARINARAYANA.—This question has been disallowed by the Chair.

Granting of M. R. P. Licence to Malnad Ryots

548. Sri KONANDUR LINGAPPA (Thirthahalli).—

Will the Minister for Agriculture and Forests be pleased to state :—

(*a*) whether the Government would decide to grant M.R.P. licence again which had been granted to Malnad Ryots from a long time ;

(*b*) whether it has come to their notice that it is necessary to grant the said licence ;

(*c*) whether it has come to their notice that the forest officers are harassing the Malnad ryots in various ways in this behalf ?